| KARNATAKA POWER CORPORATION LTD. | # ಕರ್ನಾಟಕ ವಿದ್ಯುತ್ ನಿಗಮ ನಿಯಮಿತ<br>(ಕರ್ನಾಟಕ ಸರ್ಕಾರದ ಉದ್ದಿಮೆ)<br>CIN: U85110KA1970SGC001919 |
|---|---|

ಪ್ರಧಾನ ಕಛೇರಿ: ನಂ.82, ಶಕ್ತಿಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001

ವೆಬ್‌ಸೈಟ್: https://kpcl.karnataka.gov.in

ಸಂಖ್ಯೆ: ಎ1ಪಿ1ಸಿ(ಎಎಲ್‌ಒ)/ ದಿನಾಂಕ:20.05.2025

## ಅಧಿಸೂಚನೆ

### ಗುತ್ತಿಗೆ ಆಧಾರದ ಮೇಲೆ ನೇಮಕಾತಿ

ನಿಗಮದ ಕಾನೂನು ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ನಿರ್ವಹಿಸಲು 2 (1+1) ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ **ಸಹಾಯಕ ಕಾನೂನು ಅಧಿಕಾರಿ** ಹುದ್ದೆಗೆ (02 ಹುದ್ದೆ) ನೇಮಿಸಲು ನಿಗಮವು ಉದ್ದೇಶಿಸಿದೆ.

| ಹುದ್ದೆ | ಹುದ್ದೆಗಳ ಸಂಖ್ಯೆ | ನಿಗದಿಪಡಿಸಿದ ಅರ್ಹತೆ ಮತ್ತು ಅನುಭವ |
|---|---|---|
| ಸಹಾಯಕ ಕಾನೂನು ಅಧಿಕಾರಿ | 02 | 1. ಅಂಗೀಕೃತ ವಿಶ್ವವಿದ್ಯಾಲಯದಿಂದ (ಮೂರು ಅಥವಾ ಐದು ವರ್ಷಗಳ) ಕಾನೂನು ಪದವಿ (Degree in law) ಪಡೆದಿರಬೇಕು.<br>2. ಕನಿಷ್ಟ ಶೇಕಡ.40 ರಷ್ಟು ಅಂಕಗಳನ್ನು ಕಾನೂನು ಪದವಿ (Degree in law) ಯಲ್ಲಿ ಗಳಿಸಿರಬೇಕು (ಮೂರು ಅಥವಾ ಐದು ವರ್ಷಗಳ ಸರಾಸರಿ);<br>3. ವಕೀಲ ವೃತ್ತಿಯಲ್ಲಿ ಕನಿಷ್ಟ 05 ವರ್ಷಗಳ ಅನುಭವವಿರಬೇಕು.<br>4. ವಯೋಮಿತಿ: 40 ವರ್ಷ ಮೇಲ್ಪಟ್ಟ. |

**ಸೂಚನೆ:**

a) ನೋಂದಣಿ ಸಂಖ್ಯೆ ಹಾಗೂ ನೋಂದಣಿ ದಿನಾಂಕವುಳ್ಳ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ರವರು ನೀಡಿದ ಮೂಲ ಗುರುತಿನ ಕಾರ್ಡ್ ಹೊಂದಿರಬೇಕು.

b) ವಕೀಲ ವೃತ್ತಿಯ 05 ವರ್ಷ ಅನುಭವದ ಬಗ್ಗೆ ಬಾರ್ ಅಸೋಸಿಯೇಷನ್‌ನಿನ ಅಧ್ಯಕ್ಷರ/ಕಾರ್ಯದರ್ಶಿಯ ರವರಿಂದ ಮೂಲ ಪ್ರಮಾಣ ಪತ್ರ ಹೊಂದಿರಬೇಕು.

**1. ಅರ್ಜಿ ಸಲ್ಲಿಸುವ ವಿಧಾನ:**

ಅಭ್ಯರ್ಥಿಗಳು ನಿಗಮದ ವೆಬ್‌ಸೈಟ್ **https://kpcl.karnataka.gov.in** ನಲ್ಲಿ ಲಭ್ಯವಿರುವ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ವಿದ್ಯಾರ್ಹತೆ/ಅನುಭವಗೆ ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿ **kpclcontractappt@gmail.com** ಇ-ಮೇಲ್‌ಗೆ ದಿನಾಂಕ **31.05.2025 ಸಂಜೆ 5:30 ಗಂಟೆ** ರೊಳಗಾಗಿ ಸಲ್ಲಿಸತಕ್ಕದ್ದು. ನಿಗದಿತ ಸಮಯ/ದಿನಾಂಕದ ನಂತರ ಸ್ವೀಕೃಗೊಂಡ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಇತರೆ ಯಾವುದೇ ನಮೂನೆಯಲ್ಲಿ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.

**2. ವೇತನ ಹಾಗೂ ಇತರೆ ಸೌಲಭ್ಯಗಳು:**

ಅ. ಸದರಿ ಹುದ್ದೆಗೆ ಮಾಹೆಯಾನ ಸಂಭಾವನೆ ರೂ.**65,000/-** [subjected to deduction of income tax as per rules]

ಆ. ಪ್ರತಿ ಮಾಹೆಯಾನ ಒಂದು ಸಾಂದರ್ಭಿಕ ರಜೆ ಮಾತ್ರ ನೀಡಲಾಗುವುದು.

ಇ. ನೇಮಕ ಹೊಂದಿದ ಅಭ್ಯರ್ಥಿಗಳು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಗತ್ಯವಿರುವ ಪ್ರಯಾಣಗಳಿಗೆ ನಿಗಮದ ಸಹಾಯಕ ಕಾನೂನು ಅಧಿಕಾರಿ/ಸಹಾಯಕ ಅಭಿಯಂತರರು ಹುದ್ದೆಗೆ ಅರ್ಹವಿರುವ TA/DA ಯನ್ನು ನೀಡಲಾಗುವುದು.

**3. ಆಯ್ಕೆ ವಿಧಾನ :**

ಸಂದರ್ಶನವನ್ನು ನಡೆಸಿ ಆಯ್ಕೆ ಮಾಡಲಾಗುವುದು.

**ಆದ್ಯತೆ:** ಕರ್ನಾಟಕ ರಾಜ್ಯ ಆಡಳಿತ ನ್ಯಾಯಾಧೀಕರಣದಲ್ಲಿ (ಕೆಎಸ್‌ಎಟಿ) ಹಾಗೂ ಉಚ್ಚ ನ್ಯಾಯಾಲಯದಲ್ಲಿ ಕರ್ನಾಟಕ ಸಿವಿಲ್ ಸೇವಾ ನಿಯಮಗಳ ವೃತ್ತಿಯಲ್ಲಿ ಅನುಭವವಿದ್ದವವರಿಗೆ ಹಾಗೂ ಆಂಗ್ಲ ಭಾಷೆಯ ಕಂಪ್ಯೂಟರ್ ಹಾಗೂ ಬೆರಳಚ್ಚು ಅನುಭವವುಳ್ಳವರಿಗೆ ಆದ್ಯತೆ.

**4. ಗುತ್ತಿಗೆ ನೇಮಕಾತಿಯ ಅವಧಿ:**

ಸದರಿ ಗುತ್ತಿಗೆ ನೇಮಕಾತಿಯು ಎರಡು ವರ್ಷದ ಅವಧಿಯಾಗಿದ್ದು, ಪ್ರಸ್ತುತ 06 ತಿಂಗಳ ಅವಧಿಗೆ ಸೀಮಿತವಾಗಿರುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ಪ್ರತಿ 06 ತಿಂಗಳಿಗೊಮ್ಮೆ ಕಾರ್ಯನಿರ್ವಹಿಸಿರುವುದು ತೃಪ್ತಿಕರವಾಗಿರುತ್ತದೆಯೆಂದು ವಿಭಾಗದ ಮುಖ್ಯಸ್ಥರು ತಿಳಿಸಿದಲ್ಲಿ ಇವರ ಗುತ್ತಿಗೆ ಅವಧಿಯನ್ನು ವಿಸ್ತರಿಸಲಾಗುವುದು.

**5. ಸಲ್ಲಿಸಬೇಕಾದ ದಾಖಲೆಗಳು :**

ಅಭ್ಯರ್ಥಿಗಳು ವಯಸ್ಸು, ವಿದ್ಯಾರ್ಹತೆ, ಅನುಭವ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ಮೂಲ ದಾಖಲೆಗಳ ಜೊತೆಗೆ – ಸ್ವದೃಢೀಕೃತ (Self attested) ಜೆರಾಕ್ಸ್ ಪ್ರತಿ ಮತ್ತು ಇತ್ತೀಚಿನ ಒಂದು ಭಾವಚಿತ್ರದೊಂದಿಗೆ ಹಾಜರಾಗತಕ್ಕದ್ದು.

i) ಜನ್ಮ ದಿನಾಂಕಕ್ಕೆ ಆಧಾರವಾಗಿ ಹಾಗೂ ಜೇಷ್ಠತೆಯನ್ನು ನಿರ್ಧರಿಸಲು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.

ii) ನೋಂದಣಿ ಸಂಖ್ಯೆ ಹಾಗೂ ನೋಂದಣಿ ದಿನಾಂಕವುಳ್ಳ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ರವರು ನೀಡಿದ ಮೂಲ ಗುರುತಿನ ಕಾರ್ಡ್

iii) ವಕೀಲ ವೃತ್ತಿಯ 05 ವರ್ಷ ಅನುಭವದ ಬಗ್ಗೆ ಬಾರ್ ಅಸೋಸಿಯೇಷನ್‌ನಿನ ಅಧ್ಯಕ್ಷರ/ಕಾರ್ಯದರ್ಶಿಯ ರವರಿಂದ ಮೂಲ ಪ್ರಮಾಣ ಪತ್ರ ಹೊಂದಿರಬೇಕು.

iv) ಪದವಿ ಮತ್ತು ಕಾನೂನು ವಿಷಯದಲ್ಲಿ ಪದವಿಗೆ ಸಂಬಂಧಪಟ್ಟ ಪ್ರಮಾಣ ಪತ್ರ. (Degree/ Convocation certificate) ಮತ್ತು ಎಲ್ಲಾ ಪರೀಕ್ಷೆಗಳ(ಪ್ರತಿ ವರ್ಷ/ಪ್ರತಿ ಸೆಮಿಸ್ಟರ್‌ಗಳ) ಅಂಕಪಟ್ಟಿಗಳು.

**6. ದಾಖಲಾತಿಗಳ ಪರಿಶೀಲನೆ/ಸಂದರ್ಶನಕ್ಕೆ ಹಾಜರಾಗಬೇಕಾದ ಸಂದರ್ಭದಲ್ಲಿ ನಿಗಮದಿಂದ ಅಭ್ಯರ್ಥಿಗಳಿಗೆ ಯಾವುದೇ ಪ್ರಯಾಣ/ದಿನಭತ್ಯೆ (TA/DA) ನೀಡಲಾಗುವುದಿಲ್ಲ.**

**7. ಅಗತ್ಯ ಸೂಚನೆಗಳು:**

ಅ. ಗುತ್ತಿಗೆ ಆಧಾರದ ಮೇಲೆ ನೇಮಕ ಹೊಂದುವ ಸಹಾಯಕ ಕಾನೂನು ಅಧಿಕಾರಿ ರವರು ನಿಗಮದ ಪ್ರಧಾನ ಕಛೇರಿ, ಬೆಂಗಳೂರು ಹಾಗೂ ಬಿಟಿಪಿಎಸ್/ಕುಡಿತಿನಿ, ಬಳ್ಳಾರಿ ಜಿಲ್ಲೆಗೆ ನಿಯೋಜಿಸಲಾಗುವುದು.

ಆ. ಈ ಗುತ್ತಿಗೆ ಆದಾರದ ನೇಮಕಾತಿಯು ನಿಗಮದ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ರೂ.500/– ಮೌಲ್ಯದ ಎಂಬೋಸ್ ಮಾಡಿದ ಛಾಪ ಕಾಗದದಲ್ಲಿ ನಿಗಮದೊಂದಿಗೆ ಸೇವಾ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

ಇ. ಅಭ್ಯರ್ಥಿಯು ಯಾವುದೇ ತಪ್ಪು ಮಾಹಿತಿಯನ್ನು ನೀಡಿರುವುದು ಕಂಡು ಬಂದಲ್ಲಿ ಅದಕ್ಕೆ ಅವನು/ಅವಳ ಗುತ್ತಿಗೆ ನೇಮಕಾತಿಯ ಅನರ್ಹಗೊಳಿಸುವುದಲ್ಲದೆ ಸೂಕ್ತ ಕಾನೂನು ಕ್ರಮವನ್ನು ಜರುಗಿಸಲಾಗುವುದು.

ಈ. ಗುತ್ತಿಗೆ ಆದಾರದ ಮೇಲೆ ನೇಮಕಾತಿಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು ಅಭ್ಯರ್ಥಿಗಳು ಖಾಯಂ ಉದ್ಯೋಗಕ್ಕಾಗಿ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ ಹಾಗೂ ಅದಾಗ್ಯೂ ಯಾವುದೇ ಸಂದರ್ಭದಲ್ಲಿ ನಿಗಮವು ಅಭ್ಯರ್ಥಿಗಳಿಗೆ ಯಾವುದೇ ಕಾರಣಗಳನ್ನು ಮತ್ತು ಪರಿಹಾರವನ್ನು ನೀಡದೆ ಒಂದು ತಿಂಗಳ ಮುಂಚಿತವಾಗಿ ಸೂಚನೆ ನೀಡುವುದರೊಂದಿಗೆ ಸೇವೆಯಿಂದ ತೆಗೆದುಹಾಕಲು ನಿಗಮವು ಹಕ್ಕನ್ನು ಹೊಂದಿರುತ್ತದೆ.

ಉ. ಅಭ್ಯರ್ಥಿಗಳು ಗುತ್ತಿಗೆ ಅವಧಿಯ ಮಧ್ಯದಲ್ಲಿ ಸೇವೆಯಿಂದ ರಾಜೀನಾಮೆ ಕೊಡಲು ಇಚ್ಚಿಸಿದಲ್ಲಿ ಒಂದು ತಿಂಗಳ ಮೊದಲು ನೋಟಿಸ್ ನೀಡತಕ್ಕದ್ದು.

ಊ. ನಿಗಮವು ಈ ಗುತ್ತಿಗೆ ಆದಾರದ ನೇಮಕಾತಿಯನ್ನು ಭಾಗಶಃ/ಪೂರ್ಣವಾಗಿ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ರದ್ದುಪಡಿಸುವ ಅಧಿಕಾರವನ್ನು ಹೊಂದಿದೆ.

20/5/25

ನಿರ್ದೇಶಕರು(ಮಾ.ಸಂ.)